ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರವರ ಆಫೀಸುನಿಂದ—

ಪ್ರಕಟನೆ.

ತಾರೀಖು 20ನೆ ಅಕ್ಟೋಬರ್ 1909.

ಪೊಲೀಸ್ ಇನ್‌ಸ್ಪೆಕ್ಟರಾಗಿ ಇದ್ದು ಹಾಲೀ ನ್ಯೂತಪಟ್ಟು ಇರುವ ಮಹಮ್ಮದ್‌ಹುಸೇ ಎಂಬುವರಿಂದ ಸದರಿಯವರ ಬಾಖಿ ತು ಸಾಲಗಳಿಗಾಗಿ ವಸೂಲಾದ ಮೊಬಲಗು ಹನ್ನೆರಡು ರೂಪಾಯಿ ನಾಲ್ಕು ಆಣೆ (12—4—0) ಗಳು ನಮ್ಮ ಆಫೀಸಿನಲ್ಲಿ ನಿಂ ತು ಇರುತ್ತೆ. ಆದ್ದರಿಂದ ಈ ಪ್ರಕಟನೆಯ ತಾರೀಖು ಲಾಗಾಯಿತು ಆರು ತಿಂಗಳೊಳಗಾಗಿ ಮೇಲ್ಕಂಡ ಮಾಜಿ ಪೋಲೀಸ್ ಇನ್‌ಸ್ಪೆಕ್ಟರ್ ಮಹಮ್ಮದ್ ಹುಸೇರ ವಾರಸ್ದಾರ್ರುಗಳಾಗಲೀ, ಅಥವಾ ಸಾಲಗಾರರೇ ಆಗಲೀ ಹಕ್ಕು ಸ್ಥಿರಪಡಿಸದೇ ಹೋದರೆ, ಸದರಿ ಮೊಬಲಗನ್ನು ಗೌರ್ನಮೆಂಟ್ ಜಮೆಗೆ ತೆಗದುಕೊಳ್ಳಲ್ಪಡುತ್ತೆಂತಾ ಇದರ ಮೂಲಕ ಎಲ್ಲರಿಗೂ ತಿಳಿಯಪಡಿಸಿ ಇದೆ.

ಎಂ. ಪಿ. ವಿಶ್ವನಾಥರಾವ್,
ಪೋಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಸಾಗರ ತಾಲ್ಲೂಕಿನಲ್ಲಿ ಗೆರಸಪ್ಪಾ ಫಾಲ್ಸ್ ಬಳಿ ಇರುವ ಜೋಗದಿನ ಟ್ರಾವಲರ್ಸ್ ಬಂಗ್ಲೆಯು ಸ॥1909ನೆ ನವಂಬರು 1ರ ಲಾಗಾಯಿತು 27ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಿರುತ್ತಾಗಿ ಇದರಿಂದ ಸಮು ಸ್ತ ಜನರಿಗೆ ತಿಳಿಯಪಡಿಸಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ :—ಸಾಗರ ತಾಲ್ಲೂಕಿಗೆ ಸೇರಿದ ಸಾಗರ ಮತ್ತು ಅನಂತಪುರದಲ್ಲಿ ರುವ ಟ್ರಾವಲರ್ಸ್ ಬಂಗಲೆಗಳನ್ನು ಸ॥1909ನೆ ಇಸವಿ ನವಂಬರು 13ರ ಲಾಗಾಯಿತು 25ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಲ್ಪಟ್ಟಿರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ತಾರೀಖು 12ನೆ ನವಂಬರು 1909, ಶಿವಮೊಗ್ಗ.

ಶಿವಮೊಗ್ಗಾ ಟವನ್ನಲ್ಲಿರುವ ಟ್ರಾವಲರ್ಸ್ ಬಂಗ್ಲೆಯಲ್ಲಿ ಪ್ರಯಾಣೀಕರು 1909ನೆ ನವಂಬರ್ 15ರ ಲಾಗಾಯಿತು 25ರ ವರಿಗೆ ಇಳಿಯುವದಕ್ಕೆ ಅವಕಾಶವಿರುವದಿಲ್ಲಾ.

ಬಿ. ಭೀಮರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಮೂಡಿಗೆರೆ ತಾಲ್ಲೂಕು ಜೋಡಿ ಗೊಣಿಬೀಡು ಅಗ್ರಹಾರವು ಸರ್ಕಾರಕ್ಕೆ ಬರತಕ್ಕ ಬಾಕಿಗೋಸ್ಕರವಾಗಿ ಮೂಡಿಗೆರೆ ತಾ ಲ್ಲೂಕು ಕಳಸೇರಿಯಲ್ಲಿ 1909ನೆ ಇಸವಿ ನವಂಬರ್ ಮಾಹೆ 30ನೆ ತಾರೀಖು ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪ ಡುತ್ತೆಂದು ಇದರಿಂದ ಪ್ರಸಿದ್ಧಪಡಿಸಿರುತ್ತೆ.

(ಹೆಚ್ಚು ತಪಶೀಲು ಬಗ್ಯೆ 1909ನೆ ಇಸವಿ ನವಂಬರ್ 4ನೆ ವರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 838ನೆ ಪುಟ ವನ್ನು ನೋಡತಕ್ಕದ್ದು).

ಕೆ. ಆರ್. ಶ್ರೀನಿವಾಸ್ಯೆಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 5ನೆ ನವಂಬರು 1909ನೆ ಇಸವಿ, ಚಿತ್ರದುರ್ಗ.

ಇದರಿಂದ ಸಮಸ್ತರಿಗೆ ತಿಳಿಯಪಡಿಸುವದೇನಂದರೆ—ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಆಫೀಸ್ ರಿಕಾರ್ಡಿನಲ್ಲಿ ವಿಲೆ ಇರತಕ್ಕ 1834—35ನೆ ಸಾಲ್ ಲಾಗಾಯಿತು 1860—61ನೆ ಸಾಲ್ ವರಿಗೆ ಇರುವ ಕುಳವಾರ್ ಚಿಟ್ಟೆಗಳು ಈ ತಾರೀ ಖು ಲಾಗಾಯಿತು ಮೂರು ತಿಂಗಳು ಕಳೆದನಂತರ ನಾಶಪಡಿಸಲ್ಪಡುತ್ತೆ ಆದಪ್ರಯುಕ್ತ ಸದರಿ ಕುಳವಾರು ಚಿಟ್ಟೆಗಳು ದಾಖಲೆ ಬಗ್ಯೆ ಬೇಕಾಗಿದ್ದಲ್ಲಿ ಮೇಲ್ಕಂಡ ವಾಯಿದೆ ಒಳಗೆ ಹಾಜರಾಗಿ ದರಖಾಸ್ತು ಮೂಲಕ ನಕಲ್ ತೆಗದುಕೊಳ್ಳಬಹುದು.

ಡಿ. ಶ್ರೀನಿವಾಸ್ಯೆಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.